ವಿ. ಹಮೀದ್, ವಿಟ್ಲ
*ಮೃಗಳು ಹೆಚ್ಚಾಗಿ ಇರುವ ಜಾಗ ಯಾವುದು?*




ಸ್ಮಶಾನಗಳು– ರಾಜ್ಯದಲ್ಲೇ ತಿಂಗಳಿಗೆ ಕನಿಷ್ಠ ಐವತ್ತು ಮೃಗಳ ಕಳ್ಳತನವಾಗುತ್ತದೆ.

ಸರ್ವಜಿತ, ಹುಬ್ಬಳ್ಳಿ
*ಸಾಹಿತ್ಯ ಪ್ರಪಂಚದಲ್ಲಿ ನೀವು ಎಡಪಂಥೀಯರೋ, ಬಲಪಂಥೀಯರೋ?*
ಬಲವಾಗಿ ಎಡವುವ ಪಂಥದವನು.

ವಿಜಯ್‌ಕುಮಾರ್ ಎಚ್.ಕೆ. ಶಕ್ತಿನಗರ
*ರಾಮ್ ಸರ್, ನಿದ್ರೆ ಬರದಿದ್ದರೆ ಏನಂತೀರಿ?*
ರಾಜಕಾರಣಿಗಳ ಭಾಷಣ ಕೇಳುತ್ತೇನೆ. ನಕ್ಕೂ ನಕ್ಕೂ ಸುಸ್ತಾಗಿ ನಿದ್ರೆ ಬರುತ್ತದೆ.

ಕು.ಗೋ., ಉಡುಪಿ
*ಮುಂದಿನ ಬಾರಿ ಮೂರು ಮುಖ್ಯಮಂತ್ರಿಗಳಂತಲ್ಲಾ.....?*
ಮೂರಲ್ಲ, ಐದಂತೆ. ಹೊರಕ್ಕೆ ನಾಲ್ಕು, ಬಾಯಿ ಬಡ್ಕೊಳಕ್ಕೆ ಒಬ್ಬರು.

ಸೃಜನ ಜೈನ್, ಹೂವಿನಹಡಗಲಿ
*ಸಿಕ್ಕದ-ದಕ್ಕದ ಉತ್ತರ ಯಾವುದು ಸಾರ್?*




ಉತ್ತರಧ್ರುವ.

ಕುಬೇರಪ್ಪ ಎಂ. ವಿಭೂತಿ, ಹರಿಹರ
*ಹುಟ್ಟುವಾಗ ಇಲ್ಲದ ಭಯ ಸಾಯುವಾಗ ಏಕೆ ಇರುತ್ತದೆ?*
ಚಿತ್ರಗುಪ್ತರು ಎಲ್ಲದರ ಕರೆಕ್ಟ್ ಅಕೌಂಟ್ ಇಟ್ಟಿರ್ತಾರಲ್ಲ; ಜನಕ್ಕೆ ಸರಿಯಾದ ಲೆಕ್ಕಾಂದ್ರೆ ಸತ್ತೂ ಭಯ ತಪ್ಪಲ್ಲ.

ಪಿ. ಗೋವಿಂದರಾಜ್, ಶಿವಮೊಗ್ಗ
*ಕಾಡುಹರಟೆಗೂ, ತಲೆಹರಟೆಗೂ ಇರುವ ವ್ಯತ್ಯಾಸವೇನು?*
ಆಟೋದಂತೆ ಅಡ್ಡಾದಿಡ್ಡಿ ಹೋದರೆ ಕಾಡುಹರಟೆ; ವ್ಹೀಲಿಂಗ್‌ನಂತೆ ರೊಯ್ಯನೆದ್ದರೆ ತಲೆಹರಟೆ.

ಜೆ.ಸಿ. ರವಿಕುಮಾರ್, ಜಯಸುವರ್ಣಪುರ
*ಬಾಲ್ಯದಲ್ಲಿ ತಂದೆತಾಯಿಗೆ, ವಯಸ್ಸಿನಲ್ಲಿ ಸಂಸಾರಕ್ಕೆ, ಮುಪ್ಪಿನಲ್ಲಿ ಮಕ್ಕಳಿಗೆ, ಹೆದರದೆ ಬದುಕುವ ವ್ಯಕ್ತಿಯನ್ನು ಏನೆನ್ನಬಹುದು?*
ಅನಾಥ.

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಸತ್ತು ಬದುಕುವುದು ಮೇಲೋ, ಬದುಕಿ ಸಾಯುವುದು ಮೇಲೋ?*
ಎರಡೂ ಅಲ್ಲ; ಸತ್ಕಾರ್ಯ ಮಾಡಿ ಸತ್ತಮೇಲೂ ಬದುಕುವುದು.

ಮಲ್ಲನಗೌಡ ಗಂ. ಪಾಟೀಲ, ರಾಮದುರ್ಗ
*ನಿದ್ರೆಗೂ, ಚಿರನಿದ್ರೆಗೂ ಏನು ವ್ಯತ್ಯಾಸ?*
ಒಂದೇ ಅಕ್ಷರ; ನಿದ್ರೆಯ ನಂತರ ಕಾಫಿ; ಚಿರನಿದ್ರೆಯ ನಂತರ ಕಾಫಿನ್.

ಎಸ್.ಜಿ. ಕರನಂದಿ, ಹುನಗುಂದ
*ಹೊರಗೆ ಬಡಾಯಿ ಕೊಚ್ಚುವ ಭಾರಿ ಜನ ಮನೆಯಲ್ಲಿ ಏಕೆ ಅಬ್ಬರಿಸುವುದಿಲ್ಲ?*
ಅವರದು ಏರ್ ಕಂಡೀಷನರ್ ಜಾತಿ; ಹೊರಗಿನವರಿಗೆ ಸದ್ದು, ಒಳಗೆ ಮೌನ, ತಂಪು.

ಮಹಾವೀರ ಕಾಸರ, ಶಿವಮೊಗ್ಗ
*ಬೆಳಿಗ್ಗೆ ಅತ್ತಿಗೆ ಮನೆಯಲ್ಲಿದ್ದರೂ ಅವಿವಾಹಿತ ನಾದಿನಿಯೇ ನಲ್ಲಿ ನೀರು ಹಿಡಿಯುವುದೇಕೆ?*
ಪರವಾಗಿಲ್ವೆ... ನೀವೂ ಅಷ್ಟೊತ್ತಿಗೇ ಎದ್ದು ನೋಡ್ತೀರಿ!

ಎಚ್.ಆರ್. ದೇಸಾಯಿ, ರಾಯಚೂರು
*ನಾವು ಬಯಸದೇ ಈ ಜಗತ್ತಿಗೆ ಹುಟ್ಟಿ ಬಂದುದಕ್ಕೆ ಅನುಭವಿಸಲೇಬೇಕಾದ ಕಠಿಣ ಶಿಕ್ಷೆ ಯಾವುದು?*
ಛೆ! ಸೀರಿಯಲ್‌ಗಳ ಬಗ್ಗೆ ಅಷ್ಟೊಂದು ಬೇಜಾರು ಮಾಡಿಕೊಳ್ಳಬೇಡಿ. ಚಾನಲ್ ಬದಲಿಸಿ.

ಎಂ.ಎ. ಕುಮಾರ್, ಬೆಂಗಳೂರು
*ಸಂಕಟದಲ್ಲಿ ಅತಿ ಹೆಚ್ಚು ಸಂಕಟ ಯಾವುದು?*
ಆದಾಯ ತೆರಿಗೆ ಕಟ್ಟುವುದು.

## ಬಹುಮಾನಿತ ಪ್ರಶ್ನೆ

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಸತ್ಯ ಹೇಳುವವರು ಸಿಗುವುದು ಗುಡಿಯಲ್ಲೋ, ಬಾರ್‌ನಲ್ಲೋ?*
ಬೆಳಗ್ಗೆ ಗುಡಿಯಲ್ಲಿ, ಸಾಯಂಕಾಲ ಬಾರ್‌ನಲ್ಲಿ.

ದಿನೇಶ್, ಗುಡ್ಡದೂರು
*ಹೆಣ್ಣು, ಹೊನ್ನು, ಮಣ್ಣು; ಇದರಲ್ಲಿ ಗಂಡಿಗೇಕೆ ಸ್ಥಾನವಿಲ್ಲ?*
ಇದೆಯಲ್ಲ; ಮೊದಲೆರಡರ ಹಿಂದೆ ಬಿದ್ದವನು ಸೇರಲು ಮಣ್ಣಿನಲ್ಲಿ ಸ್ಥಾನ ಇದ್ದೇ ಇದೆ.

ಕೆ.ವಿ. ಶಿವಕುಮಾರ್ ಕಾಳೀಹುಂಡಿ, ಮೈಸೂರು
*ನನ್ನನ್ನು ನೋಡಿದ ತಕ್ಷಣ ಇಲ್ಲೊಬ್ಬಳು 'ಎಲ್ಲಿ ಜಾರಿತೋ ಮನವೂ ಅಂತ ಹಾಡ್ತಾಳಲ್ಲಾ....?*
ಅದೇ ಹಾಡಿನಲ್ಲಿ 'ಬೇಲಿ ಸಾಲ' ಎಂದಿದೆಯಲ್ಲ, ಅದನ್ನು ನೆನಪಿಸಲಂತೆ. ಫೆನ್ಸಿಂಗ್ ಹಾಕ್ಕಿಸ್ಕೊಂಡ್ ದುಡ್ಡು ರಿಟರ್ನ್ ಮಾಡ್ತಾರ್ದೇ...?

ಮಲ್ಲಿಕಾರ್ಜುನ ಗಚ್ಚಿ, ಗೋಗಿ
*ಸರ್ವಸಂಗ ಪರಿತ್ಯಾಗಿಗಳಾದ ಮಠಾಧೀಶರಿಗೇಕೆ ಕಿರೀಟ, ಕಾರು, ಭೋಪರಾಕುಗಳ ವೈಭವ?*



ಸಂಗ ಬಿಟ್ಟಿರಬಹುದು, ಸಂಘ ಬಿಟ್ಟಿಲ್ಲವಲ್ಲ! ಮಠವೆಂಬ ಸಂಘದ ರಾಜಕಾರಣದಲ್ಲಿ ಮಠಾಧೀಶ ದಾಳ.

ಜಯದೇವ ಹಲಕಿ, ಗೋಕಾಕ
*ಮದುವೆ ಆಗಲೇಬೇಕೆ ರಾಮ್?*
ಮಾನವಗುಣವಿದ್ದರೆ ಆಗಿ; ಪಶುವಿನ ಗುಣವಿದ್ದರೆ ಖಂಡಿತ ಬೇಡ.

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ
*ಅನ್ನ ನೀಡಿದ ಭೂಮಿ ಶ್ರೇಷ್ಠವೋ, ಜನ್ಮ ನೀಡಿದ ತಾಯಿ ಶ್ರೇಷ್ಠವೋ?*
ತಾಯಿಗೂ ಊಟ ಬೇಕಾದ್ದರಿಂದ ಅನ್ನ ನೀಡಿದ ಭೂಮಿಯೇ ಶ್ರೇಷ್ಠ.

■ ರಾಮ್